ಕರ್ನಾಟಕ ವಿಧಾನ ಸಭೆ

ಗುರುವಾರ 24ನೇ ಜೂನ್ 1999ರಂದು
ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು

ಉಪಾಧ್ಯಕ್ಷರು : (ಶ್ರೀ. ಚಂದ್ರಶೇಖರ ರೆಡ್ಡಿ ದೇಶಮುಖ್ ಮದನ) ಅವರು
ಪೀಠವನ್ನು ಅಲಂಕರಿಸಿದ್ದರು.

1) ಸಂತಾಪ ಸೂಚನೆಗಳು

ಉಪಾಧ್ಯಕ್ಷರು:-

ಇತ್ತೀಚೆಗೆ ದಾವಣಗೆರೆ ಜಿಲ್ಲೆಯ ದೇವರಬೆಳಗೆರೆ ಗ್ರಾಮದ ಹತ್ತಿರ ಸಂಭವಿಸಿದ ಬಸ್ ದುರಂತದಲ್ಲಿ ಮುಗ್ಧ ಮಕ್ಕಳು ಸೇರಿದಂತೆ ಅನೇಕರು ಸಾವಿಗೀಡಾಗಿರುವುದನ್ನು ಮತ್ತು ಮಾಜಿ ವಿಧಾನಸಭೆ ಸದಸ್ಯರಾಗಿದ್ದ ಶ್ರೀ ಪಿ.ಬಿ.ಪಾಟೀಲ್, ಶ್ರೀ ಸಿದ್ದಯ್ಯ ಹಾಗೂ ಮೈಸೂರು ಪ್ರಜಾ ಪ್ರತಿನಿಧಿಸಭೆ ಸದಸ್ಯರಾಗಿದ್ದ ಶ್ರೀ ಎಂ. ಸುಬ್ಬರಾವ್ ಇವರುಗಳು ನಿಧನರಾಗಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇವೆ.

1. ದಾವಣಗೆರೆ ಜಿಲ್ಲೆಯ ದೇವರ ಬೆಳಕೆರೆ ಬಸ್‌ದುರಂತ

ದಿನಾಂಕ 7-6-1999ರಂದು ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕು ದೇವ್ತರಬೆಳಕೆರೆ ಬಳಿ ಶ್ಯಾಗಲಿಹಳ್ಳ ಮತ್ತು ಸೂಳೆಕೆರೆ ಹಳ್ಳದ ಸಂಗಮದಲ್ಲಿ ಕಟ್ಟಿದ ಸೇತುವೆಯಿಂದ ಜಲಾಶಯಕ್ಕೆ ಖಾಸಗಿ ಬಸ್ ಬಿದ್ದು 40ಜನ ಮುಗ್ಧ ಶಾಲಾ ಮಕ್ಕಳು ಸೇರಿದಂತೆ 100 ಜನಕ್ಕೂ ಹೆಚ್ಚು ಪ್ರಯಾಣಿಕರು ಜಲಸಮಾಧಿಯಾದರು.

ಆಡಳಿತ ವ್ಯವಸ್ಥೆಯಲ್ಲಿನ ತೀವ್ರ ಲೋಪದೋಷ, ಜವಾಬ್ದಾರಿ ಸ್ಥಾನಗಳನ್ನು ಅಲಂಕರಿಸಿದಂಥ ಅಧಿಕಾರಿಗಳ ತೀವ್ರ ಅಲಕ್ಷ್ಯ ಮನೋಭಾವ ಮತ್ತು ಮಾನವ ಪ್ರಾಣದ ಮೌಲ್ಯ ಸಂಪೂರ್ಣ ಕುಸಿದು ಹೋಗಿರತಕ್ಕಂಥ ಇಂದಿನ ಪರಿಸ್ಥಿತಿಯಲ್ಲಿ ನಡೆದಿರತಕ್ಕಂಥ ಈ ಭೀಕರ ದುರಂತ ಈ ಸದನದ ಗಮನವನ್ನು ಸೆಳೆಯುತ್ತಾ ಕಣ್ಣನ್ನು ತೆರೆಸಬೇಕಾಗಿದೆ. ತಮ್ಮದಲ್ಲದ ತಪ್ಪಿಗಾಗಿ ಅಮೂಲ್ಯ ಜೀವಗಳನ್ನು ಕಳಕೊಂಡ ಈ ಕುಟುಂಬಗಳಿಗೆ ಈ ಸದನವು ತನ್ನ ಪ್ರಾಮಾಣಿಕ ಕಳಕಳಿಯನ್ನು ವ್ಯಕ್ತಪಡಿಸುತ್ತಾ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

2. ಪಿ.ಬಿ.ಪಾಟೀಲ್

ಮಾಜಿ ಸದಸ್ಯರಾದ ಶ್ರೀ ಪಿ.ಬಿ.ಪಾಟೀಲರವರು ಬೆಳಗಾವಿ ಜಿಲ್ಲೆಯ ಬೈಲಹೊಂಗಲ್ ಮತ್ತು ಕಿತ್ತೂರು ವಿಧಾನ ಸಭೆ ಕ್ಷೇತ್ರಗಳಿಂದ 5 ಮತ್ತು 6ನೇ ವಿಧಾನಸಭೆಗೆ ಕ್ರಮವಾಗಿ ಕಾಂಗ್ರೆಸ್(ಒ) ಮತ್ತು ಜನತಾ ಪಕ್ಷದ ವತಿಯಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ.

ರಾಜ್ಯದಲ್ಲಿ ಪ್ರತಿಷ್ಠಿತ ವಿದ್ಯಾಸಂಸ್ಥೆಯಾದ ಬೆಳಗಾವಿ ಮೂಲದ ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಹಾಗೂ ಸಂಸ್ಥೆಯ ನಿರ್ದೇಶಕರಾಗಿ 35 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಬೆಳಗಾವಿ ನಗರ ಪ್ರಸಿದ್ಧ ಕ್ರಿಮಿನಲ್ ವಕೀಲರೂ ಆಗಿದ್ದ ಅವರು ಬೆಳಗಾವಿ ವಕೀಲರ ಸಂಘದ ಅಧ್ಯಕ್ಷರಾಗಿ ಎರಡು ಅವಧಿಗೆ ಸೇವೆ ಸಲ್ಲಿಸಿರುತ್ತಾರೆ.

ಮೃದು ಸ್ವಭಾವ ಹಾಗೂ ಸ್ನೇಹ ಜೀವಿಗಳಾಗಿದ್ದ ಇವರು ಉತ್ತರ ಕರ್ನಾಟಕದಲ್ಲಿ ಪಿ.ಬಿ.ಎಂದೇ ಹೆಸರುವಾಸಿಯಾಗಿದ್ದು, ವಕೀಲ ವೃತ್ತಿಯನ್ನು ನಡೆಸಿಕೊಂಡು ಬೆಳಗಾವಿ ಜಿಲ್ಲೆಯಲ್ಲಿ ಪ್ರಸಿದ್ಧರಾಗಿದ್ದರು. ಶ್ರೀಯುತರು ದಿನಾಂಕ : 25-04-1999ರಂದು ನಿಧನ ಹೊಂದಿರುತ್ತಾರೆ.

3. ಎಸ್.ಸಿದ್ದಯ್ಯ

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎಸ್. ಸಿದ್ದಯ್ಯನವರು ಮೈಸೂರು ಜಿಲ್ಲೆಯ ಬನ್ನೂರ ತಾಲ್ಲೂಕಿನ ಕೇತಾಪುರದಲ್ಲಿ 1928ರಲ್ಲಿ ಜನಿಸಿದರು. ಇವರು 1962-67ಅವಧಿಗೆ ಬನ್ನೂರು ವಿಧಾನ ಸಭಾಕ್ಷೇತ್ರದಿಂದ ಸ್ಪರ್ಧಿಸಿ ಆಯ್ಕೆಯಾಗಿ ಜನ ಸೇವೆ ಮಾಡಿದ್ದರು. ಕೇತಾಪುರದಲ್ಲಿ ವಕೀಲ ವೃತ್ತಿ

ಪ್ರಾರಂಭಿಸಿ ಪಿ.ಎಸ್.ಪಿ. ಪಕ್ಷದಲ್ಲಿ ಕೆಲಸ ಮಾಡಿದ್ದ ಇವರು ದಿನಾಂಕ 18.5.1999ರಂದು ನಿಧನ ಹೊಂದಿರುತ್ತಾರೆ.

4. ಶ್ರೀ ಎಂ.ಸುಬ್ಬರಾವ್

ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿದ್ದ 88 ವರ್ಷದ ಶ್ರೀ ಎಂ. ಸುಬ್ಬರಾವ್ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲಾ ಬ್ರಾಹ್ಮಣ ಮಹಾ ಸಭಾ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ವೃತ್ತಿಯಿಂದ ಇವರು ಚನ್ನಪಟ್ಟಣ ತಾಲ್ಲೂಕಿನಲ್ಲಿ ಶ್ಯಾನುಭೋಗರಾಗಿ ಕಾರ್ಯನಿರ್ವಹಿಸಿದ್ದರು.

ಶ್ರೀಯುತರು ದಿನಾಂಕ : 14-06-1999ರಂದು ಬೆಂಗಳೂರಿನಲ್ಲಿ ನಿಧನರಾಗಿರುತ್ತಾರೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳಿಸಿಕೊಡಲಾಗುವುದು.

(2) ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರಗರ ಅಭಿವೃದ್ಧಿಗಾಗಿ ಒದಗಿಸಲಾದ ಅನುದಾನ.

238(1586)

ಶ್ರೀ ಕುಂಬ್ಳೇ ಸುಂದರರಾವ್ (ಸುರತ್ಕಲ್): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

(ಅ) 1997ರಿಂದ ಈವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರಗರ ಅಭಿವೃದ್ಧಿಗಾಗಿ ಒದಗಿಸಲಾದ ಅನುದಾನವೆಷ್ಟು? (ವರ್ಷವಾರು ವಿವರ ಒದಗಿಸುವುದು)

ಶ್ರೀ. ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು.)

ಅ) ದಕ್ಷಿಣ ಕನ್ನಡ ಜಿಲ್ಲೆಯ ಕೊರಗ ಜನಾಂಗದವರಿಗೆ 1997-98ನೇ ಸಾಲಿನಿಂದ ಒದಗಿಸಲಾದ ಅನುದಾನದ ವಿವರ ಕೆಳಕಂಡಂತಿದೆ:

(ರೂ.ಲಕ್ಷಗಳಲ್ಲಿ)

ವರ್ಷ	ರಾಜ್ಯ	ಕೇಂದ್ರ	ಒಟ್ಟು
1997-98	45.00	53.00	98.00
1998-99	5.50	30.30	35.80

ಶ್ರೀ ಕುಂಬ್ಳೆ ಸುಂದರರಾವ್: ಮಾನ್ಯ ಉಪಾಧ್ಯಕ್ಷರೆ, ಕೊರಗ ಜನಾಂಗದ ಅಭಿವೃದ್ಧಿಗೆ ಇರಿಸಿದ ಅನುದಾನದಲ್ಲಿ ಆ ಸಮುದಾಯದ ಅಭಿವೃದ್ಧಿಗಾಗಿ ಸರ್ಕಾರ ಮಾಡುತ್ತಿರುವ ಕಾರ್ಯಕ್ರಮಗಳ ವಿವರಗಳನ್ನು ನೀಡಬೇಕು. ಇಷ್ಟು ವರ್ಷಗಳು ಕಳೆದರೂ ಕೂಡ ಕೊರಗ ಸಮುದಾಯವು ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿದೆ. ಎಂಜಲು ಎತ್ತುವ, ಎಂಜಲು ತಿನ್ನುವ, ಅವರನ್ನು ಮುಟ್ಟಿಸಿಕೊಳ್ಳದೇ